# 7

# ಬಾಪ್ತಿಸ್ಮ ಮತ್ತು "ಕ್ರಿಸ್ತನನ್ನು ಧರಿಸಿಕೊಳ್ಳುವುದು"

*"ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ. ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ. ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನುಸಾರವಾಗಿ ಬಾಧ್ಯರೂ ಆಗಿದ್ದೀರಿ" (ಗಲಾತ್ಯ 3:26-29).*

ಬೈಬಲಿನಲ್ಲಿ ಅತೀ ಮುಖ್ಯವಾದ ಸಂಬಂಧಗಳಲ್ಲಿ ಒಂದು ದೇವರ ಮಕ್ಕಳಾಗಿರುವುದು. ಈ ಸಂಬಂಧದ ಮೇಲೆ ಈ ಜೀವನದಲ್ಲಿ ಹಾಗೂ ಬರಲಿಕ್ಕಿದ್ದ ಜೀವನದಲ್ಲಿ ದೇವರು ಒದಗಿಸುವ ಎಲ್ಲಾ ಲಾಭಗಳು ಅವಲಂಬಿಸಿರುತ್ತವೆ (ರೋಮಾಪುರ 8:17; ಗಲಾತ್ಯ 4:7).

ರಕ್ಷಣೆಗಾಗಿ ಮತ್ತು ಪುತ್ರತ್ವಕ್ಕಾಗಿ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಮೇಲೆ ಅವಲಂಬಿಸಲಿಕ್ಕೆ ಗಲಾತ್ಯದವರನ್ನು ಕೆಲವರು ತಪ್ಪು ಮಾರ್ಗಕ್ಕೆ ಎಳೆಯುತ್ತಿದ್ದದರ ಬಗ್ಗೆ ಪೌಲನು ಚಿಂತಿತನಾಗಿದ್ದನು. ನೀತಿ ನಿರ್ಣಯವು ಧರ್ಮಶಾಸ್ತ್ರದ, ಮುಖಾಂತರ ಬರುವದಿಲ್ಲ ಆದರೆ ಯೇಸುವಿನಲ್ಲಿ ನಂಬಿಕೆಯ ಮುಖಾಂತರ ಬರುವದೆಂದು ತೋರಿಸಿದನು (ಗಲಾತ್ಯ 2:16). ನಮ್ಮನ್ನು ನೀತಿವಂತರನ್ನಾಗಿ ಮಾಡುವದಕ್ಕೆ ಧರ್ಮಶಾಸ್ತ್ರವೂ ಕೃಪೆಯನ್ನು ಒದಗಿಸಲಿಲ್ಲ; ಅದು ಹಾಗೆ ಮಾಡಿದ್ದರೆ, ಯೇಸುವು ಮರಣ ಹೊಂದುವ ಅಗತ್ಯತೆಯಿರಲಿಲ್ಲ (2:21).

ಧರ್ಮಶಾಸ್ತ್ರವು ಕೊಡಲ್ಪಡುವದಕ್ಕಿಂತ ಮೊದಲು ಅಬ್ರಹಾಮನ ಮುಖಾಂತರ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುವೆನೆಂದು ದೇವರು ವಾಗ್ದಾನ ಮಾಡಿದ್ದನು (ಗಲಾತ್ಯ 3:8; ನೋಡಿರಿ ಆದಿಕಾಂಡ 12:3; 22:18). ಧರ್ಮಶಾಸ್ತ್ರವು ಆಶೀರ್ವಾದವನ್ನು ತರಲಿಲ್ಲ; ಆದರೆ ಅದು ಪ್ರತಿಯೊಬ್ಬರನ್ನು ತನ್ನ ಅಧೀನತೆಯಲ್ಲಿ ಶಪಿಸಿತು, ಯಾಕಂದರೆ ಧರ್ಮಶಾಸ್ತ್ರವು ನ್ಯೂನತೆಯಿಲ್ಲದ ವಿಧೇಯತೆಯನ್ನು ಕೇಳಿತ್ತು (3:10). ಇದು, ಹೀಗಿದ್ದರೂ, ಅಬ್ರಹಾಮನ ಒಬ್ಬ ವಂಶಸ್ಥರಲ್ಲಿ ಒಬ್ಬನಾದ ಕ್ರಿಸ್ತನ ಮುಖಾಂತರ, ಆಶೀರ್ವದಿಸುವ ದೇವರ ವಾಗ್ದಾನವನ್ನು ರದ್ದು ಪಡಿಸಲಿಕ್ಕಾಗಲಿಲ್ಲ (3:16, 17). ಇಸ್ರಾಯೇಲ್ಯರು ಅಪರಾಧಿಗಳು ಎಂದು ಅರ್ಥಮಾಡಿಕೊಳ್ಳಲು ಸಹಾಯ ಮಾಡಲಿಕ್ಕೆ ಕೊಡಲ್ಪಟ್ಟ ಧರ್ಮಶಾಸ್ತ್ರವು, ಸಂತತಿಯಾದ ಯೇಸುವು ಬರುವವರೆಗೆ ಜಾರಿಯಲ್ಲಿರುವುದು (3:19).

ಧರ್ಮಶಾಸ್ತ್ರ ಪದ್ಧತಿಗಳು ಮಟ್ಟಗಳನ್ನು ಕೊಡುತ್ತವೆ, ಅವುಗಳು ಮುರಿಯಲ್ಪಡು

ವಾಗ, ಜನರನ್ನು ನಿಯಮ ಮೀರಿದವರನ್ನಾಗಿ ಮಾಡುತ್ತವೆ, ಆದರೆ ನೀತಿವಂತರನ್ನಾಗಿ ಮಾಡುವದಿಲ್ಲ. ಕೃಪೆಯು ಮಾತ್ರವೇ, ಯೇಸುವಿನ ಮುಖಾಂತರ ಸಾಧ್ಯವಾಗಿ ಮಾಡಲ್ಪಟ್ಟಂತೆ, ಪಾಪಿಗಳನ್ನು ನೀತಿವಂತರನ್ನಾಗಿ ಮಾಡಬಹುದು. ಶಾಸ್ತ್ರ ಪದ್ಧತಿಯು ಜೀವಕೊಡಬಹುದಾದರೆ, ನೀತಿಯು ಧರ್ಮಶಾಸ್ತ್ರದ ಮುಖಾಂತರ ಬಂದಿರಬಹುದಾದದ್ದಾಗಿರುತ್ತದೆ (3:21). ಒಂದು ನಿಯಮ ಪದ್ಧತಿಯು ಕೃಪೆಯಿಂದ ಹದಮಾಲ್ಪಡದೇ ಇದ್ದದ್ದು, ಅದರ ಅಧೀನತೆಯಲ್ಲಿ ಇರುವವರನ್ನು ಶಪಿಸುವದಷ್ಟನ್ನೇ ಮಾಡುತ್ತದೆ, ಯಾಕಂದರೆ ಅಂಥ ಪದ್ಧತಿಯ ಅಧೀನತೆಯಲ್ಲಿರುವವರು ಎಂದೂ ನಿಯಮವನ್ನು ಉಲ್ಲಂಘಿಸದೇ ಇರುವವರು ಮಾತ್ರವೇ ನೀತಿವಂತರಾಗಬಹುದು (3:10). ಧರ್ಮಶಾಸ್ತ್ರದಿಂದ ನಾವು ಯಾರೂ ನೀತಿವಂತರಾಗಿ ಮಾಡಲ್ಪಡುವದಿಲ್ಲ, ಯಾಕಂದರೆ ನಾವೆಲ್ಲರೂ ಪಾಪ ಮಾಡುತ್ತೇವೆ (3:21, 22; ನೋಡಿರಿ ರೋಮಾಪುರ 3:23). ನಿಯಮ ಮುರಿದವರಾಗಿ, ನಾವು ಇನ್ನೊಬ್ಬಾತನ, ಅಂದರೆ ಕ್ರಿಸ್ತನ ಕಾರ್ಯದಿಂದ, ಮಾತ್ರವೇ ನೀತಿವಂತರಾಗಿ ಮಾಡಲ್ಪಡಬಹುದು, ನಾವು ಆತನ ಕಾರ್ಯದ ಮೇಲೆ ಅವಲಂಭಿಸತಕ್ಕದ್ದು (3:22). ಕಟ್ಟುನಿಟ್ಟಾದ ಕಾನುನು ಬದ್ಧ ಪದ್ಧತಿಯ ಮೇಲೆ ಅವಲಂಭಿಸಿದ ನಮ್ಮ ಸ್ವಂತ ಕಾರ್ಯಗಳ ಮೇಲೆ ನಾವು ಅವಲಂಭಿಸಲಿಕ್ಕಾಗುವದಿಲ್ಲ.

ಕ್ರೈಸ್ತರು ಮತ್ತು ಕ್ರೈಸ್ತೇತರರು ಇಬ್ಬರೂ ಒಂದು ರೀತಿಯ ನಿಯಮಕ್ಕೆ ಲೆಕ್ಕಾಕೊಡಬೇಕಾಗುತ್ತದೆ; ಇಲ್ಲದಿದ್ದರೆ, ಪಾಪಿಗಳೇ ಇರುವದಿಲ್ಲ. "ಧರ್ಮಶಾಸ್ತ್ರವಿಲ್ಲದ ಪಕ್ಷದಲ್ಲಿ ಮೀರೋಣವೆಂಬುದೂ ಇಲ್ಲ" (ರೋಮಾಪುರ 4:15). ಮೀರೋಣವು ಇಲ್ಲದಿರುವಲ್ಲಿ, ಕೃಪೆಗಾಗಿ ಅವಶ್ಯಕತೆಯೂ ಇರುವದಿಲ್ಲ. ಕ್ರೈಸ್ತ ಯುಗದಲ್ಲಿ ನಾವು ಕ್ರಿಸ್ತನ ನಿಯಮದ ಕೆಳಗೆ ಇರುವೆವು (1 ಕೊರಿಂಥ 9:21; ಗಲಾತ್ಯ 6:2). ಯೇಸುವಿನ ಮುಖಾಂತರ ಬಂದ ಕೃಪೆಯೊಂದಿಗೆ ನಾವು ಆಶೀರ್ವಾದಿಸಲ್ಪಟ್ಟಿದ್ದೇವೆ - ಅದು ಧರ್ಮಶಾಸ್ತ್ರದಿಂದ ಒದಗಿಸಲ್ಪಟ್ಟ ಕೃಪೆಯಾಗಿರುವದಿಲ್ಲ (ಗಲಾತ್ಯ 5:4). ತನ್ನ ಮರಣದ ಮುಖಾಂತರ ಯೇಸುವು ತನಗಿಂತ ಮೊದಲು ಜೀವಿಸಿದ್ದವರಿಗೆ ಕೃಪೆಯು ಲಭ್ಯವಾಗುವಂತೆ ಮಾಡಿದ್ದಾನೆ (ಇಬ್ರಿಯ 9:15) ಮತ್ತು ಎಲ್ಲಾ ಯುಗಗಳ ಜನರನ್ನೊಳಗೊಂಡು ಇಡೀ ಜಗತ್ತಿಗಾಗಿ ಲಭ್ಯವಾಗುವಂತೆ ಮಾಡಿದ್ದಾನೆ (1 ಯೋಹಾನ 2:2).

ಧರ್ಮಶಾಸ್ತ್ರದ ಉದ್ದೇಶವು ನಮ್ಮ ರಕ್ಷಕನಂತೆ ಯೇಸುವಿಗಾಗಿ ಅಗತ್ಯತೆಯನ್ನು ಬೋಧಿಸುವುದು (ಗಲಾತ್ಯ 3:24). ಧರ್ಮಶಾಸ್ತ್ರವು ನಮಗೆ ನಮ್ಮ ಸ್ವಂತ ನೀತಿಯುಳ್ಳ ಕೃತ್ಯಗಳ ಮುಖಾಂತರ - ಆತನ ಕಾರ್ಯದಲ್ಲಿ ಕೇವಲ ನಂಬಿಕೆಯ ಮುಖಾಂತರ ನೀತಿವಂತರನ್ನಾಗಿ ಮಾಡಲಾರದು ಎಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಸಹಾಯ ಮಾಡುತ್ತದೆ. ಈಗ ಯೇಸುವು ಬಂದಿರುವನು ಮತ್ತು ಆತನಲ್ಲಿ ನಂಬಿಕೆಯ ಮುಖಾಂತರ ನೀತಿಯನ್ನು ಸಾಧ್ಯವಾಗಿ ಮಾಡಿರುವನು, ನಾವು ಇನ್ನು ಮುಂದೆ "ಕಾಯುವವನ," ಧರ್ಮಶಾಸ್ತ್ರದ ಅಧೀನತೆಯಲ್ಲಿ ಇರುವದಿಲ್ಲ (3:25).

ಧರ್ಮಶಾಸ್ತ್ರವು ಇಸ್ರಾಯೇಲ್ಯರನ್ನು ಮಾತ್ರವೇ ದೇವರ ಒಡಂಬಡಿಕೆಯ ಜನಾಂಗವೆಂದು ಗುರುತಿಸಿತು. ಈಗ ಎಲ್ಲರೂ - ಯೆಹೂದ್ಯರು ಮತ್ತು ಅನ್ಯರು ಒಂದೇ ರೀತಿಯಲ್ಲಿ - ನಾವು ಬಾಪ್ತಿಸ್ಮ ಹೊಂದಿದಾಗ, ನಂಬಿಕೆಯ ಮುಖಾಂತರ ಕ್ರಿಸ್ತನಲ್ಲಿ ದೇವರ ಮಕ್ಕಳಾಗಬಹುದು (3:26, 27). ಕುಲ, ಸಾಮಾಜಿಕ ಸ್ಥಿತಿ, ಇಲ್ಲವೇ ಇತರ ದೈಹಿಕ ಶ್ರೇಷ್ಠತೆ ಎಂಬ ಭಿನ್ನ ಭೇದಭಾವವಿಲ್ಲದೇ, ದೇವರ ಮಕ್ಕಳಂತೆ, ನಾವು ಕ್ರಿಸ್ತನಲ್ಲಿ ಎಲ್ಲರೂ ಒಂದಾಗಿದ್ದೇವೆ (3:28).

## “ಕ್ರಿಸ್ತ ಯೇಸುವಿನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರು” (3:26)

ಪೌಲನ ಪ್ರಕಾರವಾಗಿ, ಬಾಪ್ತಿಸ್ಮವು ನಾವು ಕ್ರಿಸ್ತನಲ್ಲಿ ಪ್ರವೇಶಿಸಿ, ಕ್ರಿಸ್ತನಲ್ಲಿ ದೇವರ ಮಕ್ಕಳಾಗುವ ಸಮಯವಾಗಿದೆ. ಯೇಸುವಿನಲ್ಲಿ ಪ್ರವೇಶಿಸುವದರಿಂದ, ನಾವು ದೇವರ ಮಕ್ಕಳು ಆಗುವದಲ್ಲದೆ, ಆತನ ಸ್ವಭಾವದಲ್ಲಿ ಪಾಲುಗಾರರೂ ಆಗುತ್ತೇವೆ. “ಆದುದರಿಂದ ‘ಕ್ರಿಸ್ತ ಯೇಸುವಿನಲ್ಲಿ’ ಎಂಬುದನ್ನು ಇಡೀ ಹೇಳಿಕೆಗೆ ಸಮಂಜಸವಾದ ಧ್ವನ್ಯಾಗಿ ತೆಗೆದುಕೊಂಡು ಬೇರೆ ಕಡೆಯಲ್ಲಿ ನಿರೂಪಣೆಯನ್ನು ಪೌಲನು ಉಪಯೋಗಿಸಿದ ರೀತಿಯಲ್ಲಿ, ಅಂದರೆ ಕ್ರಿಸ್ತನೊಂದಿಗೆ ನಿಕಟ ಅನ್ಯೋನ್ಯತೆಯನ್ನು ಅನ್ವಯಿಸಿ, ಆತನ ಅನ್ಯೋನ್ಯತೆಯಲ್ಲಿ ಒಳಗೊಳಿಸುವಂತೆ ವ್ಯಾಖ್ಯಾನಿಸಲ್ಪಡಬೇಕು.”[1]

ಜೊನ್ ಆರ್. ಡಬ್ಲ್ಯೂ. ಸ್ಟೊಟ್ ಅವರು ಅದೇ ವಿಚಾರವನ್ನು ಸರಳವಾದ ರೀತಿಯಲ್ಲಿ ಹೇಳಿದ್ದಾರೆ:

> ನಾವು ದೇವರ ಮಕ್ಕಳಾಗಿದ್ದರೆ, ಆಗ ನಾವು “ನಂಬಿಕೆಯ ಮುಖಾಂತರ … ಕ್ರಿಸ್ತ ಯೇಸುವಿನಲ್ಲಿ” ಇರತಕ್ಕದ್ದು (ವಚನ 26), ಇದು “ನಂಬಿಕೆಯಿಂದ ಕ್ರಿಸ್ತ ಯೇಸುವಿನಲ್ಲಿ” [KJV] ಎಂಬ ಪರಿಚಿತವಾದದ್ದಕ್ಕಿಂತ ಹೆಚ್ಚು ಉತ್ತಮವಾದದ್ದಾಗಿದೆ. ನಂಬಿಕೆಯ ಮುಖಾಂತರ ನಾವು ಕ್ರಿಸ್ತನಲ್ಲಿ ಇದ್ದೇವೆ, ಮತ್ತು ಕ್ರಿಸ್ತನಲ್ಲಿ ಇರುವದರ ಮುಖಾಂತರ ನಾವು ದೇವರ ಪುತ್ರರಾಗಿದ್ದೇವೆ.[2]

“ಕ್ರಿಸ್ತನಲ್ಲಿ,” ಎಂಬ ಮಾತನ್ನು ಕುರಿತು ಜೇಮ್ಸ್ ಡಿ. ಡನ್ನ್ ಹೀಗೆ ಬರೆದಿದ್ದಾರೆ,

> ಇಲ್ಲಿ ಹಿನ್ನೆಲೆಯಿಂದ ಅದರ ಒತ್ತಡವು ಸಹ ಸ್ಪಷ್ಟವಾಗಿದೆ: “ಕ್ರಿಸ್ತನೊಳಗೆ” ಎಂಬುದು ವಚನ 26ರ “ಕ್ರಿಸ್ತನಲ್ಲಿ” ಎಂಬುದನ್ನು ವಿವರಿಸುತ್ತದೆ; “ಕ್ರಿಸ್ತನೊಳಗೆ ಬಾಪ್ತಿಸ್ಮ ಹೊಂದುವದರಿಂದ” ಅವರು “ಕ್ರಿಸ್ತನಲ್ಲಿ” ಬಂದರು … ಆದರೆ “ಕ್ರಿಸ್ತನೊಳಗೆ” ಎಂಬುದಕ್ಕೆ “ಕ್ರಿಸ್ತನಲ್ಲಿ” ಎಂಬುದಕ್ಕಿಂತ “ಒಳಗೆ,” ಎಂಬುದಕ್ಕೆ ಹೆಚ್ಚು ಅರ್ಥ ಇರುತ್ತದೆ. ಅವರ ಜೀವಿತಗಳು ಮತ್ತು ಅಂತಿಮಸ್ಥಿತಿಗಳು ಹಾಗೂ ಗುರುತಿಸುವಿಕೆಗಳು ಕ್ರಿಸ್ತನೊಂದಿಗೆ ಕಟ್ಟಲ್ಪಡುವ ಸಮಯ ಮತ್ತು ಕೃತಿಯನ್ನು ವಿವರಿಸುವಂತೆ ಇದು ಇರುವುದು.[3]

ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ “ನಂಬಿಕೆಯು” ಪೌಲನಿಂದ ಉಪಯೋಗಿಸಲ್ಪಟ್ಟಿದ್ದು, ಸಾಮಾನ್ಯವಾಗಿ “the” ಉಪಪದವನ್ನು ಅನುಸರಿಸುತ್ತದೆ. ಮತ್ತು “the Faith” ಎಂದು ಕರ್ಮಪದ ಅರ್ಥದಲ್ಲಿ ಉಪಯೋಗಿಸಲ್ಪಡಬೇಕು. ಹೀಗೆ ಜಾರ್ಜ್ ಡನ್ನ ತೋರಿಸಿದಂತೆ, “the Faith,” ಎಂಬ ಮಾತು “ಪತ್ರಿಕೆಯ ಮೊದಲಿನ ದಿನದಲ್ಲಿ, ಹೊಸ ಧರ್ಮಕ್ಕೆ ಅಂಕಿತವಾಗಿ ವ್ಯವಹಾರಿಕವಾಗಿ ಬಂದಿತು, ‘ಧರ್ಮಶಾಸ್ತ್ರ’ ಎಂಬುದು ಹಳೆಯದಕ್ಕೆ ಅಂಕಿತವಾಗಿ ಸೇವೆ ಮಾಡಿತು.”[4]

“ಯಾಕಂದರೆ ಕ್ರಿಸ್ತ ಯೇಸುವಿನಲ್ಲಿ, ನಂಬಿಕೆಯ ಮುಖಾಂತರ ನೀವೆಲ್ಲರೂ ದೇವರ ಪುತ್ರರಾಗಿದ್ದೀರಿ” ಎಂದು ಗಲಾತ್ಯ 3:26 ಭಾಷಾಂತರಿಸಲ್ಪಟ್ಟಿದೆ (RSV); “ಕ್ರಿಸ್ತನಲ್ಲಿ ನಂಬಿಕೆಯ ಮುಖಾಂತರ ನಿಮ್ಮಲ್ಲಿ ಎಲ್ಲರೂ ದೇವರ ಮಕ್ಕಳಾಗಿದ್ದೀರಿ” (ಮೆಕ್ಕೊರ್ಡ್ ಅವರ ಹೊಸ ಒಡಂಬಡಿಕೆ). ಈ ಎರಡು ಬಾಷಾಂತರಗಳ ಒಂದುಗೂಡಿಸುವಿಕೆಯ ವಚನವನ್ನು ಅಕ್ಷರಶಃವಾಗಿ ಕೊಡುತ್ತದೆ: “ಯಾಕಂದರೆ ನೀವು ಎಲ್ಲರೂ ನಂಬಿಕೆಯ ಮುಖಾಂತರ ಕ್ರಿಸ್ತನಲ್ಲಿ ದೇವರ ಪುತ್ರರಾಗಿದ್ದೀರಿ.”

ಯೇಸುವಿನಿಂದ ನಮಗೆ ತರಲ್ಪಟ್ಟ ನಂಬಿಕೆಯ ಮುಖಾಂತರ, ಆತನಲ್ಲಿ ನಾವು

ದೇವರ ಪುತ್ರರಾಗಬಹುದು. ಬಾಪ್ತಿಸ್ಮವು ದೇವರ ಪುತ್ರರಾಗಲು ಕ್ರಿಸ್ತನೊಳಗೆ ಪ್ರವೇಶಿಸುವ ಸಮಯವಾಗಿದೆ.

## "ನೀವೆಲ್ಲರೂ ಕ್ರಿಸ್ತನಲ್ಲಿ ಬಾಪ್ತಿಸ್ಮ ಮಾಡಿಸಿಕೊಂಡಿರುವಿರಿ" (3:27ಎ)

ಕ್ರೈಸ್ತರು ಕಾಯುವ ಆಳಿನ (tutor) ಅಧೀನತೆಯಲ್ಲಿ ಇರುವವರಲ್ಲ, ಯಾಕಂದರೆ ("for" ಗ್ರೀಕ ಪದ *gar* ಎಂಬುದರ ಅರ್ಥ "ವಿವರಣೆಯ ರೀತಿಯಲ್ಲಿ"[5]), ನಾವು ನಂಬಿಕೆಯಿಂದ ದೇವರ ಪುತ್ರರಾಗಿದ್ದೇವೆ. ಇಲ್ಲಿಯ ಅನ್ವಯವು, ಕ್ರೈಸ್ತ ಯುಗದಲ್ಲಿ ನಾವು ಪೋಷಕನ ಹಸ್ತದಿಂದ ನಡಿಸಲ್ಪಡುವ ಅವಶ್ಯಕತೆಯಿದ್ದ ಮಕ್ಕಳಾಗಿರುವದಿಲ್ಲ (ಗ್ರೀಕ: *paidagogos* ವಚನಗಳು 24, 25). "ಪೌಲನ ಸಮಯದಲ್ಲಿ 'pedagogue' ನು ಗ್ರೀಕ ಮತ್ತು ರೋಮನ್ ಕುಟುಂಬಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳಲ್ಪಡುತ್ತಿದ್ದ ಒಬ್ಬ ಗುಲಾಮನಾಗಿದ್ದನು. ಅವನ ಕೆಲಸವು ಅಲ್ಪವಯಸ್ಸಿನ (ಆರರಿಂದ ಹದಿನಾರನೆಯ ವಯಸ್ಸಿನ) ಮಕ್ಕಳ ಮೇಲ್ವಿಚಾರಣೆಯನ್ನು ಮನೆಯ ಒಳಗೂ ಮತ್ತು ಮನೆಯ ಹೊರಗೂ ಮಾಡುವುದಾಗಿತ್ತು."[6]

F. F. Bruce ಅವರು "pedagogue" ನನ್ನು ಹೀಗೆ ವಿವರಿಸಿದರು,

> ... ವೈಯಕ್ತಿಕ ಗುಲಾಮನು ಸ್ವತಂತ್ರವಾಗಿ ಜನಿಸಿದ ಬಾಲಕನು ತನ್ನ ದಾಯಿಯ ಜೋಪಾಸನೆಯ ನಂತರದಿಂದ, ಅವನು ಹೋದಲ್ಲೆಲ್ಲಾ ಅವನ ಜೊತೆಯಾಗಿ ಹೋಗುವವನಾಗಿದ್ದನು, ... ಅವನನ್ನು ಶಾಲೆಗೆ ಕರೆದು ಕೊಂಡು ಹೋಗುವುದು ... ಅಲ್ಲಿ ಅವನಿಗಾಗಿ ಕಾಯುವುದು ... ಆ ಮೇಲೆ ಮನೆಗೆ ಕರೆದುಕೊಂಡು ಹೋಗುವುದು ಹಾಗೂ ಅವನು ಕಲಿತ ಪಾಠಗಳನ್ನು ಪುನರುಚ್ಚರಿಸುವಂತೆ ಮಾಡಿ ಅವನ ಜ್ಞಾಪಕ ಶಕ್ತಿಯನ್ನು ಪರೀಕ್ಷಿಸುವುದು ... ಅವನ ಕೆಲಸವಾಗಿತ್ತು. ಬಾಲಕನ ಅಲ್ಪಪ್ರಾಯದ ಅವಧಿಯಲ್ಲಿ *ಪೈಡಾಗೋಗಸನು* ಅವನು ವಯಸ್ಸಿಗೆ ಬರುವವವರೆಗೆ ಅವನ ಸ್ವತಂತ್ರತೆಯ ಮೇಲೆ ನಿಯಂತ್ರಣ ವಿಧಿಸುತ್ತಿದ್ದನು. ಅವನು ತನ್ನ ಸ್ವಾತಂತ್ರದ ಜವಾಬ್ದಾರಿಕೆಯನ್ನು ಉಪಯೋಗಿಸುವದರ ಬಗ್ಗೆ ನಂಬಿಕೆ ಬರುವವರೆಗೆ ಹೀಗಿರುತ್ತಿತ್ತು.[7]

ಹಾಗಾದರೆ, ಕಾಯುವ ಆಳು, ಮನೆತನದ ಗುಲಾಮನಾಗಿದ್ದನು, ಮಗುವನ್ನು ಶಿಕ್ಷಕನ ಬಳಿಗೆ ತರುವವರೆಗೆ ಅವನನ್ನು ತನ್ನ ಜವಾಬ್ದಾರಿಕೆಯೊಳಗೆ ಇಟ್ಟುಕೊಳ್ಳುತ್ತಿದ್ದನು.

ಅದೇ ರೀತಿಯಲ್ಲಿ, ಧರ್ಮಶಾಸ್ತ್ರವು ನಮ್ಮನ್ನು ಯೇಸುವಿನ ಬಳಿಗೆ ತರಲು "ಪೆಡಾಗೋಗನಂತೆ," ಮನೆಯ ಗುಲಾಮನಂತೆ, ಸೇವೆ ಮಾಡಿತು. ಯೇಸುವು ಬಂದದ್ದರಿಂದ, ಇನ್ನು ಮುಂದೆ ಧರ್ಮಶಾಸ್ತ್ರವು ನಮ್ಮ ಪೋಷಕನಾಗಿರುವ ಅಗತ್ಯತೆಯಿಲ್ಲ. ಈಗ ನಾವು, ನಂಬಿಕೆಯ ಮುಖಾಂತರ ಕ್ರಿಸ್ತನಲ್ಲಿ ದೇವರ ಮಕ್ಕಳಾಗಿರುವದರಿಂದ (ಗಲಾತ್ಯ 3:26, 27), ಪುತ್ರರ ಆಶೀರ್ವಾದಗಳನ್ನೂ ಸ್ವಾತಂತ್ರ್ಯವನ್ನೂ ಈಗ ನಾವು ಅನುಭವಿಸಿಸಬಹುದು (ಗಲಾತ್ಯ 4:6, 7).

ಮಕ್ಕಳಾಗುವದರಿಂದ ನಾವು ನಂಬಿಕೆಯ ಮುಖಾಂತರ ಕ್ರಿಸ್ತನ ಕುಟುಂಬದ ಹೋಲಿಕೆಯುಳ್ಳವರಾಗಬೇಕು "ಯಾಕಂದರೆ" "for" ("ವಿವರಣೆಯ ರೀತಿಯಲ್ಲಿ") ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದುವದರಿಂದ ನಾವು ಯೇಸುವನ್ನು ಧರಿಸಿಕೊಳ್ಳುವವರಾಗುತ್ತೇವೆ. ಅಂದರೆ, ನಾವು ಆತನ ಸ್ವಭಾವವನ್ನು ತೆಗೆದುಕೊಳ್ಳುತ್ತೇವೆ (ಗಲಾತ್ಯ 3:26, 27). ಬಾಪ್ತಿಸ್ಮ ಮಾಡಿಸಿಕೊಳ್ಳುವ ಸಾಧನದಿಂದ, ನಾವು ದೇವರ ಮಕ್ಕಳ

ಾಗುತ್ತೇವೆ ಮತ್ತು ಮಕ್ಕಳು ತಮ್ಮ ತಂದೆತಾಯಿಗಳ ಸ್ವಭಾವವನ್ನು ತೆಗೆದುಕೊಳ್ಳುವಂತೆ ದೇವರ ಸ್ವಭಾವವನ್ನು ತೆಗೆದು ಕೊಳ್ಳುತ್ತೇವೆ. ನಾವು ನಂಬಿಕೆಗೆ ಉತ್ತರ ಕೊಡುವಾಗ, ಬಾಪ್ತಿಸ್ಮವು ಈ ಪರಿಣಾಮಗಳನ್ನು ಸಾಧಿಸುತ್ತದೆ.

## "ಕ್ರಿಸ್ತನನ್ನು ಧರಿಸಿಕೊಂಡಿರುವಿರಿ" (3:27ಬಿ)

ನಾವು "ದೇವರ ಮಕ್ಕಳು" ಆಗಿರುವದರಿಂದ ದೇವರ ಸ್ವಭಾವವುಳ್ಳವರಾಗಿರುವ ವಿಚಾರವು "ಕ್ರಿಸ್ತನನ್ನು ಧರಿಸಿಕೊಂಡಿರಿ" ಎಂಬ ವ್ಯಕ್ತಪಡಿಸುವಿಕೆಯಲ್ಲಿ ಒಳಗೊಂಡಿರುತ್ತದೆ (ಗಲಾತ್ಯ 3:27), ಇದು "ಕ್ರಿಸ್ತನನ್ನು ಹೊದ್ದುಕೊಂಡಿದ್ದೀರಿ" ಎಂದೂ ಭಾಷಾಂತರಿಸಲ್ಪಟ್ಟಿದೆ. ಒಂದು ಅಧಿಕೃತವಾದ ನಿರೂಪಣೆ ಹೀಗಿದೆ:

> "ಧರಿಸು" ಎಂಬುದು ರೂಪಕವಾಗಿ ಉಪಯೋಗಿಸಲ್ಪಟ್ಟಾಗ ಸ್ವಭಾವವನ್ನು ತೆಗೆದುಕೋ ಇಲ್ಲವೇ ಉಲ್ಲೇಖಿಸಲ್ಪಟ್ಟ ವ್ಯಕ್ತಿಯ ನಿಲುವನ್ನು ತೆಗೆದುಕೋ ಇಲ್ಲವೇ ಉಲ್ಲೇಖಿಸಲ್ಪಟ್ಟ ವ್ಯಕ್ತಿಯ "ಹಾಗೆ ಆಗು" ಎಂದರ್ಥ ಕೊಡುತ್ತದೆ. ಕ್ರಿಸ್ತನನ್ನು ಧರಿಸಿಕೊಳ್ಳುವುದು ಕ್ರಿಸ್ತನಂತೆ ಆಗುವುದು, ಆತನ ಗುಣವನ್ನು ತನ್ನ ಮೇಲೆ ತೆಗೆದುಕೊಳ್ಳುವುದು, ದೇವರ ಮುಂದೆ ಆತನ ನಿಲುವು (ದೇವರ ಕುಮಾರನಂತೆ) ಆಗಿರುತ್ತದೆ.[8]

ಹೆರ್ಮಾನ್ ಎನ್. ರಿಡ್ಡರ್‌ಬೋಸ್ ಹೀಗೆ ವ್ಯಾಖ್ಯಾನಿಸಿದ್ದಾರೆ:

> ಒಬ್ಬನು ಧರಿಸಿಕೊಳ್ಳುವ ಉಡುಪಿನಂತೆ (ಇಲ್ಲವೇ ಧರಿಸಿದಂತೆ: ನಿಷ್ಕ್ರಿಯ ಭಾಷಾಂತರಕ್ಕೂ ಕೆಲವೊಂದು ಪ್ರತಿಪಾದನೆ ಇರುತ್ತದೆ) ಅದನ್ನು ಧರಿಸುವವನನ್ನು ಸುತ್ತಿಕೊಳ್ಳುತ್ತದೆ, ಮತ್ತು ಅವನ ಕಾಣಿಸಿಕೊಳ್ಳುವಿಕೆಯನ್ನೂ ಅವನ ಜೀವನವನ್ನೂ ಗುರುತಿಸುತ್ತದೆ, ಹಾಗೆಯೇ ಕ್ರಿಸ್ತನಲ್ಲಿ ಬಾಪ್ತಿಸ್ಮ ಹೊಂದಿದ ವ್ಯಕ್ತಿಯು ಕ್ರಿಸ್ತನಲ್ಲಿ ಮತ್ತು ಆತನಿಂದ ತರಲ್ಪಟ್ಟ ರಕ್ಷಣೆಯಲ್ಲಿ ಸಂಪೂರ್ಣವಾಗಿ ತೆಗೆದುಕೊಳ್ಳಲ್ಪಡುತ್ತಾನೆ.[9]

ಜಾರ್ಜ್ ಎಸ್. ಡಂಕನ್ ಹೀಗೆ ಹೇಳಿದ್ದಾನೆ,

> ಧರಿಸುವವನು ಅವನು ಧರಿಸಿಕೊಳ್ಳುವದರಿಂದ ಧಾರ್ಮಿಕವಾದ ರೀತಿಯಲ್ಲಿ ಗುರುತಿಸಲ್ಪಡುತ್ತಾನೆ ... ಹೀಗೆ, ಒಬ್ಬ ಮನುಷ್ಯನು ಬಾಪ್ತಿಸ್ಮ ಹೊಂದುವಾಗ, ಇನ್ನು ಜೀವಿಸುವವನು ಅವನಲ್ಲ, ಆದರೆ ಅವನಲ್ಲಿ ಜೀವಿಸುವವನು ಕ್ರಿಸ್ತನೇ ಎನ್ನುವಷ್ಟು ಮಟ್ಟಿಗೆ, ಅವನು ಅಷ್ಟು ಸಂಪೂರ್ಣವಾಗಿ ಕ್ರಿಸ್ತನೊಂದಿಗೆ ಗುರುತಿಸಲ್ಪಡುತ್ತಾನೆ. ಆ ವ್ಯಕ್ತಿಯು ಏನಾಗಿದ್ದಾನೇ ಅದು ಮುಖ್ಯವಲ್ಲ, ಕ್ರಿಸ್ತನಲ್ಲಿ ಅವನು ನೂತನ ಜೀವಿಯಾಗಿದ್ದಾನೆ.[10]

ನಮ್ಮ ನೋಟವು ನಮ್ಮ ದೈಹಿಕ ಉಡುಗೆಯ, ಸ್ವಭಾವವನ್ನು ತೆಗೆದು ಕೊಳ್ಳುವ ರೀತಿಯಲ್ಲಿಯೇ ಕ್ರಿಸ್ತನೊಂದಿಗೆ ಧರಿಸಿಕೊಳ್ಳಲ್ಪಡುವದರಿಂದ ನಾವು ಆತನ ಗುಣಲಕ್ಷಣಗಳನ್ನು ತೆಗೆದುಕೊಳ್ಳುತ್ತೇವೆ. ಇದು ಬಾಪ್ತಿಸ್ಮದ ಬಾಹ್ಯ ಆಚರಣೆಯ ಕಾರಣದಿಂದ ಮಾತ್ರವೇ ಸಂಭವಿಸುವದಿಲ್ಲ. ಆದರೆ, ನಾವು "ಪೂರ್ವ ಸ್ವಭಾವವನ್ನು ಅದರ ಕೃತ್ಯಗಳ ಕೂಡ ತೆಗೆದಿಟ್ಟು, ನೂತನ ಸ್ವಭಾವವನ್ನು ಧರಿಸಿಕೊಂಡಾಗ ಈ ಸ್ವಭಾವವು ಅದನ್ನು

ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ಸತ್ಯಜ್ಞಾನಕ್ಕೆ ನವೀಕರಿಸಲ್ಪಟ್ಟಾಗ" ಆದ ಕಾರ್ಯದಲ್ಲಿ ಆಂತರಿಕ ಆತ್ಮಿಕ ಒಳಗೊಳ್ಳುವಿಕೆಯ ಕಾರಣದಿಂದ ಸಂಭವಿಸುತ್ತದೆ (ಕೊಲೊಸ್ಸೆ 3:9, 10).

ಯೇಸುವು ಮಾಡಿದ್ದರಲ್ಲಿ ಮತ್ತು ಹೇಳಿದ್ದರಲ್ಲಿ ನಮ್ಮ ವಿಶ್ವಾಸವು ನಮ್ಮನ್ನು ಬಾಪ್ತಿಸ್ಮಕ್ಕೆ ನಡಿಸುವಾಗ ದೇವರು ನಮ್ಮನ್ನು ರಕ್ಷಣೆ ಮತ್ತು ಪುತ್ರತ್ವದೊಂದಿಗೆ ಬಹುಮಾನಿಸುತ್ತಾನೆ. ಬಾಪ್ತಿಸ್ಮದ ಬೆಲೆಯ ಮೇಲಷ್ಟೇ ಆತನು ನಮ್ಮನ್ನು ಬಹುಮಾನಿಸುವದಿಲ್ಲ, ಆದರೆ ಕೃತ್ಯಕ್ಕೆ ನಮ್ಮನ್ನು ಪ್ರೇರೇಪಿಸುವ ನಂಬಿಕೆಯ ಕಾರಣದಿಂದ ನಮ್ಮನ್ನು ರಕ್ಷಿಸುತ್ತಾನೆ. ಬಾಪ್ತಿಸ್ಮವು ತನ್ನಲ್ಲಿ ತಾನೇ ಅಂತ್ಯವಾಗಿರುವದಿಲ್ಲ; ಆದರೆ, ನೂತನ ಜೀವಿತದಲ್ಲಿ ಪರಿಣಾಮಗೊಳ್ಳುವ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೇಲಿನ ಒಂದು ಕಾರ್ಯವದಾಗಿರುತ್ತದೆ. ನಾವು ದೇವರ ಮಕ್ಕಳಾಗುವಾಗ, ಯೇಸುವಿನ ಸ್ವಭಾವದ ಗುಣಲಕ್ಷಣಗಳಲ್ಲಿ ಕಂಡುಕೊಳ್ಳುವ ದೇವರ ಕುಟುಂಬದ ಹೋಲಿಕೆಯನ್ನು ತೆಗೆದುಕೊಳ್ಳುವೆವು.

## "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ" (3:26, 28, 29)

### ಬಾಪ್ತಿಸ್ಮ ಮತ್ತು ಒಂದೇ ಆಗಿರುವುದು

"ನೀವೆಲ್ಲರೂ ದೇವರ ಪುತ್ರರಾಗಿದ್ದೀರಿ" ಎಂಬ ಮಾತು (ಗಲಾತ್ಯ 3:26) ಗಲಾತ್ಯದವರೆಲ್ಲರೂ ಒಂದೇ ಕುಟುಂಬದಲ್ಲಿರುವರು ಎಂಬುದನ್ನು ದೃಢಪಡಿಸಲು ಪೌಲನು ಉಪಯೋಗಿಸಿದನು. ಹಿನ್ನಲೆ, ಸಾಮಾಜಿಕ ಸ್ಥಿತಿ ಇಲ್ಲವೇ ಕುಲ ಯಾವುದೇ ಇದ್ದರೂ ಅವರು ಕ್ರಿಸ್ತನಲ್ಲಿ ಸಹೋದರರಂತೆ ಒಂದೇ ರೀತಿಯ ಆತ್ಮಿಕ ಕುಟುಂಬದ ಗುಣಲಕ್ಷಣಗಳನ್ನು ಹೊಂದಿಕೊಂಡಿರುವರು. ಬಾಪ್ತಿಸ್ಮ ಹೊಂದಿದವರೆಲ್ಲರೂ ಕ್ರಿಸ್ತನಲ್ಲಿ ಪ್ರವೇಶಿಸುವರು ಎಂದು ಹೇಳಿದನಂತರ ಪೌಲನು ಕ್ರಿಸ್ತನಲ್ಲಿ ಎಲ್ಲರೂ ಒಂದಾಗಿರುವರೆಂದು ಹೇಳಿದನು (ಗಲಾತ್ಯ 3:27, 28). ಬಾಪ್ತಿಸ್ಮವು ನಮ್ಮೆಲ್ಲರನ್ನು ದೇವರ ಪುತ್ರರನ್ನಾಗಿ ಮಾಡುವುದು ಹಾಗೂ ಈ ರೀತಿಯಲ್ಲಿ ನಮ್ಮನ್ನು ಒಂದಾಗಿ ಮಾಡುವುದು. ಅದು ನಮ್ಮನ್ನು ಅನೇಕ ಭಿನ್ನವಾದ ಧಾರ್ಮಿಕ ಗುಂಪುಗಳಲ್ಲಿ ನಮ್ಮನ್ನು ಹಾಕುವದಿಲ್ಲ, ಆದರೆ ಒಂದೇ ಕುಟುಂಬದಲ್ಲಿ: ಒಂದೇ ದೇಹದಲ್ಲಿ ಹಾಕುವುದು (1 ಕೊರಿಂಥ 12:13), ಅದು ಕ್ರಿಸ್ತನ ದೇಹ (1 ಕೊರಿಂಥ 12:27), ಅದು ಆತನ ಸಭೆ (ಕೊಲೊಸ್ಸೆ 1:18).

ಜನರನ್ನು ಅನೇಕ ಭಿನ್ನವಾದ ಸಭೆಗಳಲ್ಲಿ ಹಾಕುತ್ತ, ಅನೇಕ ಭಿನ್ನವಾದ ಬಾಪ್ತಿಸ್ಮಗಳು ಇಂದು ರೂಢಿಯಲ್ಲಿವೆ. ಹೊಸ ಒಡಂಬಡಿಕೆಯ ಒಂದೇ ಬಾಪ್ತಿಸ್ಮವು ಒಂದೇ ಒಂದು ದೇಹದಲ್ಲಿ ನಮ್ಮನ್ನು ಸೇರಿಸುತ್ತದೆ (ಎಫೆಸ 4:4, 5). ಒಂದೇ ಬಾಪ್ತಿಸ್ಮವು ಮಲ-ಸಹೋದರರನ್ನು ಮತ್ತು ಮಲ-ಸಹೋದರಿಯರನ್ನು ಸೃಷ್ಟಿಸುವುದಿಲ್ಲ, ಆದರೆ ಸ್ವಭಾವದಲ್ಲಿ ಹೋಲಿಕೆಯಲ್ಲಿರುವ ಸಹೋದರರನ್ನೂ ಮತ್ತು ಸಹೋದರಿಯರನ್ನೂ, ದೇವರ ಮಕ್ಕಳನ್ನೂ ಉತ್ಪಾದಿಸುವುದು. ಅವರು ಒಂದೇ ಕುಟುಂಬದಲ್ಲಿರುವರು, ಕ್ರಿಸ್ತನಲ್ಲಿ ಒಂದಾಗಿ ಐಕ್ಯತೆಯಲ್ಲಿರುವವರು. ಬಾಪ್ತಿಸ್ಮವು ವಿಭಜನೆಗೆ ಮೂಲವಾಗಿರದೇ, ಐಕ್ಯತೆಗೊಳಿಸುವ ಕಾರ್ಯದಂತೆ ಇರುವುದು.

### ನಾವು ಕ್ರಿಸ್ತನಿಗೆ ಒಳಪಟ್ಟಿದ್ದೇವೆ

ಯೇಸುವಿನಲ್ಲಿ ಬಾಪ್ತಿಸ್ಮ ಹೊಂದಿದ ಕಾರಣದಿಂದ ಆತನಿಗೆ ಒಳಪಟ್ಟಿರುವ ನಾವೆ

ಲ್ಲರೂ, ಅಬ್ರಹಾಮನ ಆತ್ಮಿಕ ಸಂತತಿಯವರೂ ಹಾಗೂ ಅಬ್ರಹಾಮನ ವಂಶಜನ, ಅಂದರೆ ಯೇಸುವಿನ ಮುಖಾಂತರ ದೇವರು ವಾಗ್ದಾನ ಮಾಡಿದ ಆಶೀರ್ವಾದದ ಬಾಧ್ಯಸ್ಥರೂ ಆಗಿದ್ದೇವೆ (3:29). ಆಹಾರವು ನಮ್ಮೊಳಗೆ ಪ್ರವೇಶಿಸಿ ನಮ್ಮ ಭಾಗವಾಗುವಂತೆ ಮತ್ತು ನಮಗೆ ಒಳಪಟ್ಟಿರುವಂತೆ, ಕ್ರಿಸ್ತನನ್ನು ಪ್ರವೇಶಿಸುವರು ಆತ್ಮಿಕವಾಗಿ ಆತನ ಭಾಗವಾಗುವರು ಮತ್ತು ಆತನಿಗೆ ಒಳಪಟ್ಟಿರುವವರಾಗಿರುವರು. ಆತನಲ್ಲಿ ಬಾಪ್ತಿಸ್ಮ ಹೊಂದುವದರಿಂದ ನಾವು ಈ ಸಂಬಂಧದಲ್ಲಿ ಪ್ರವೇಶಿಸುವೆವು. ನಾವು ಬಾಪ್ತಿಸ್ಮ ಹೊಂದದಿದ್ದರೆ, ನಾವು ಯೇಸುವಿನ ಹೊರಗೆ ಇರುವೆವು - ನಾವು ಆತನನ್ನು ಧರಿಸಿಕೊಂಡಿರುವದಿಲ್ಲ ಹಾಗೂ ಆತನಿಗೆ ಒಳಪಟ್ಟವರಾಗಿರುವದಿಲ್ಲ.

## ಸಾರಾಂಶ

ಬಾಪ್ತಿಸ್ಮವು ಯೇಸುವಿನ ವಿಮೋಚನಾ ಯಜ್ಞದಲ್ಲಿ ನಂಬಿಕೆಯ ಕೃತ್ಯದಂತೆ ದೇವರ ಅಗತ್ಯತೆಯಾಗಿದೆ. ನಾವು ಬಾಪ್ತಿಸ್ಮವನ್ನು ಸ್ವೀಕರಿಸುವಾಗ, ನಮ್ಮ ಪಾಪಗಳನ್ನು ತೊಳೆದು ಹಾಕಲಿಕ್ಕೆ ಮತ್ತು ನಮ್ಮ ಜೀವಿತಗಳನ್ನು ಬದಲಾಯಿಸಲಿಕ್ಕೆ ಯೇಸುವಿನ ರಕ್ತದಲ್ಲಿ ಭರವಸೆಯನ್ನು ನಾವು ವ್ಯಕ್ತಪಡಿಸುತ್ತೇವೆ. ಬಾಪ್ತಿಸ್ಮದ ಅರ್ಥವನ್ನು ತಿಳದುಕೊಂಡ ಯಥಾರ್ಥ ಹೃದಯವುಳ್ಳವನ ಪ್ರತ್ಯುತ್ತರವು ಅವನಲ್ಲಿ ನೂತನ ಜೀವನವನ್ನು ಪರಿಣಮಿಸುವುದು (ರೋಮಾಪುರ 6:4) "ಅವನನ್ನು ಸೃಷ್ಟಿಸಿದಾತನ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟದ್ದು" ಇರುವಂತೆ ಪರಿಣಾಮ ಮಾಡುವುದು (ಕೊಲೊಸ್ಸೆ 3:10). ಆತನು ನೂತನ ಸೃಷ್ಟಿಯಾಗಿ (2 ಕೊರಿಂಥ 5:17), ಯೇಸುವಿನ ಸ್ವಭಾವದಿಂದ ಧರಿಸಲ್ಪಟ್ಟ ದೇವರ ಮಗುವಾಗಿ ಬದಲಾಯಿಸಲ್ಪಡುವನು (ಗಲಾತ್ಯ 3:26, 27). ಬಾಪ್ತಿಸ್ಮವು ಒಂದು ಆಚಾರಕ್ಕೆ ಉತ್ತರವಾಗಿರುವದಕ್ಕಿಂತ ಹೆಚ್ಚಾದದ್ದಾಗಿರತಕ್ಕದ್ದು; ಅದು ನಮ್ಮನ್ನು ಯೇಸುವಿನಿಂದ ಧರಿಸಲ್ಪಟ್ಟ ದೇವರ ಮಕ್ಕಳಾಗುವಂತೆ ಮಾರ್ಪಡಿಸಬೇಕು.

---

ಟಿಪ್ಪಣೆಗಳು

[1]Daniel C. Arichea Jr. and Eugene A. Nida, *A Translator's Handbook on Paul's Letter to the Galatians* (New York: United Bible Societies, 1976), 83. [2]John R. W. Stott, *The Message of Galatians: Only One Way* (Downers Grove, III.: Inter-Varsity Press, 1968), 99. [3]James D. G. Dunn, *Black's New Testament Commentaries,* vol. 9, *A Commentary on the Epistle to the Galatians,* gen. ed. Henry Chadrick (Peabody, Mass.: Hendrickson, 1995), 203. [4]George S. Duncan, *The Epistle of Paul to the Galatians,* The Moffatt New Testament Commentary, ed. James Moffatt (Grand Rapids, Mich.: Zondervan, Hodder and Stoughton, 1955), 120. [5]In Galatians 3 "for" is the connective word between verses 25 and 26 and between verses 26 and 27. [6]Daniel C. Arichea Jr. and Eugene A. Nida, *A Translator's Handbook on Paul's Letter to the Galatians* (New York: United Bible Societies, 1976), 81. [7]F. F. Bruce, *The Epistle to the Galatians: A Commentary on the Greek Text* (Grand Rapids, Mich.: Wm. B. Eerdmans Publishing Co., 1982), 182. [8]Arichea and Nida, 84. [9]Herman N. Ridderbos, *The Epistle of Paul to the Churches of Galatia,* The New International Commentary on the New Testament (Grand Rapids, Mich.: Wm. B. Eerdmans Publishing Co.,

1953), 148. [10]George S. Duncan, *The Epistle of Paul to the Galatians,* The Moffatt New Testament Commentary, ed. James Moffatt (London: Hodder and Stoughton, 1955), 123.

---

## "ದೇವರ ಪುತ್ರರು" (ಗಲಾತ್ಯ 3:26)

"ದೇವರ ಪುತ್ರರು" ಎಂಬ ಮಾತು (1) ಮೂಲದ, (2) ಸಂಬಂಧದ, ಮತ್ತು (3) ಸ್ವಭಾವದ ಭಾವನೆಗಳನ್ನು ಒಳಗೊಂಡಿರುತ್ತದೆ.

ನಮ್ಮ ಆತ್ಮಿಕ ಕಾರಣದಿಂದ, ಮೊದಲು, ನಾವು ದೇವರ ಪುತ್ರರಾಗಿದ್ದೇವೆ. ದೇವರಿಂದ ಆತ್ಮಿಕವಾಗಿ ಹುಟ್ಟಿರುವುದು ನಮ್ಮನ್ನು ಆತನ ಪುತ್ರರನ್ನಾಗಿ ಮಾಡುತ್ತದೆ. ತಂದೆತಾಯಿಗಳಿಂದ ಹುಟ್ಟಿದವರು ಅವರ ಮಕ್ಕಳಾಗಿದ್ದಾರೆ, ಹಾಗೆಯೇ, ದೇವರಿಂದ ಹುಟ್ಟಿದವರು ಆತನ ಮಕ್ಕಳಾಗಿದ್ದಾರೆ. ಯೇಸುವಿನಿಂದ ಹೇಳಲ್ಪಟ್ಟ ನೂತನ ಜನನವನ್ನು ನಾವು ಅನುಭವಿಸಿದರೆ (ಯೋಹಾನ 3:3-5; ನೋಡಿರಿ 1 ಪೇತ್ರ 1:3, 23), ನಾವು ದೇವರ ಮಕ್ಕಳಾಗುತ್ತೇವೆ ಯಾಕಂದರೆ ನಾವು ದೇವರಿಂದ ಹುಟ್ಟಿದವರಾಗುತ್ತೇವೆ (ಯೋಹಾನ 1:13).

ಎರಡನೆಯದು, ನಾವು ದೇವರ ಪುತ್ರರು, ಆತನ ಮಕ್ಕಳು, ಯಾಕಂದರೆ, ನಾವು ಆತ್ಮಿಕವಾಗಿ ದೇವರಿಗೆ ಸಂಬಂಧಪಟ್ಟವರಾಗಿದ್ದೇವೆ. ಪೇತ್ರನು "ಮಗ" ಎಂಬುದನ್ನು ಈ ಅರ್ಥದಲ್ಲಿ ತನ್ನ ಮಗ ಎಂದು ಮಾರ್ಕನನ್ನು ಕರೆಯುವದರಿಂದ ಉಪಯೋಗಿಸಿದನು (1 ಪೇತ್ರ 5:13), ಯುವ ಆತ್ಮಿಕ ಮಗನಂತೆ ಮಾರ್ಕನು ಅವನಿಗೆ ಆತ್ಮಿಕವಾಗಿ ಸಂಬಂಧಿಸಿದ್ದನು ಎಂಬುದು ಇದರ ಅರ್ಥ.

ಮೂರನೆಯದು, ನಾವು ದೇವರ ಮಕ್ಕಳಾಗಿದ್ದೇವೆ ಯಾಕಂದರೆ, ಆತ್ಮಿಕವಾಗಿ ಹೊಸದಾಗಿ ಹುಟ್ಟುವದರಿಂದ, ಆತನ ಸ್ವಭಾವವನ್ನು, ನಾವು ಯಾರಿಂದ ಹುಟ್ಟಿರುವೆವೋ ಆತನ ಸ್ವಭಾವವನ್ನು ನಾವು ತೆಗೆದು ಕೊಳ್ಳುತ್ತೇವೆ. 1 ಯೋಹಾನ ಪತ್ರಿಕೆಯಲ್ಲಿ ನಾವು ದೇವರಿಂದ ಹುಟ್ಟಿದ್ದರೆ, ನಾವು ಪಾಪ ಮಾಡುವದಿಲ್ಲ (3:9; 5:18). ನಾವು ದೇವರನ್ನು ಪ್ರೀತಿಸುತ್ತೇವೆ ಮತ್ತು ತಿಳಿಯುತ್ತೇವೆ (4:7), ಯೇಸುವಿನಲ್ಲಿ ನಂಬುತ್ತೇವೆ (5:1), ಲೋಕವನ್ನು ಜಯಿಸುತ್ತೇವೆ (5:4), ಮತ್ತು ಸೈತಾನನು ನಮ್ಮನ್ನು ಮುಟ್ಟದಂತೆ ನಮ್ಮನ್ನು ಕಾಪಾಡಿಕೊಳ್ಳುತ್ತೇವೆ (5:18).

*"ಪುತ್ರರು" ಇಲ್ಲವೇ "ಮಕ್ಕಳು"* ಎಂದು ಭಾಷಾಂತರಿಸಲ್ಪಟ್ಟ *huioi* ಪದವು, ನಾವು ಪುತ್ರರಾಗಿರುವವರ ಇಲ್ಲವೇ ಮಕ್ಕಳಾಗಿರುವವರ ಸ್ವಭಾವವುಳ್ಳವರಾಗಿರುವೆವೆಂಬ ಅರ್ಥವನ್ನು ಒಳಗೊಂಡಿರುತ್ತದೆ. "ಪುತ್ರ" ಎಂಬುದು ಈ ಕೆಳಗಿನ ವಾಕ್ಯಭಾಗಗಳಲ್ಲಿ ಈ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ:

"ನರಕದ ಮಗ" (ಮತ್ತಾಯ 23:15).
"ಗುಡುಗಿನ ಮರಿಗಳು" (ಮಾರ್ಕ 3:17).
"ಸಮಾಧಾನದ ಮನುಷ್ಯ" [ಗ್ರೀಕ: huios, ಅರ್ಥ "ಮಗ"] (ಲೂಕ 10:6).
"ಈ ಯುಗದ ಕುಮಾರರು" (ಲೂಕ 16:8; 20:34)
"ಬೆಳಕಿನ ಮಕ್ಕಳು" (ಲೂಕ 16:8; ಯೋಹಾನ 12:36; 1 ಥೆಸಲೊನೀಕ 5:5).
"ಪುನರುತ್ಥಾನದ ಮಕ್ಕಳು" (ಲೂಕ 20:36).
"ನಾಶನಕ್ಕೆ ಗುರಿಯಾದ ಮಗ" (ಯೋಹಾನ 17:12).
"ಧೈರ್ಯದಾಯಕ ಮಗ" (ಅಪೊಸ್ತಲರ ಕೃತ್ಯಗಳು 4:36).

“ಸೈತಾನನ ಮಗ” (ಅಪೊಸ್ತಲರ ಕೃತ್ಯಗಳು 13:10).
“ಅವಿಧೇಯತೆಯ ಮಕ್ಕಳು” (ಎಫೆಸ 2:2; 5:6).
“ಹಗಲಿನ ಮಕ್ಕಳು” (1 ಥೆಸಲೊನೀಕ 5:5).
“ನಾಶನದ ಮಗನು” (2 ಥೆಸಲೊನೀಕ 2:3).

ಈ ಪ್ರತಿಯೊಂದರಲ್ಲಿ, “ಮಗ [ಮಕ್ಕಳು]” ಅಂದರೆ ಅದೇ ಸ್ವಭಾವವುಳ್ಳವರು ಎಂದರ್ಥ. ನಾವು ದೇವರ ಮಕ್ಕಳು, ಯಾಕಂದರೆ, ಆತನಿಂದ ಜನಿಸಿದವರು, ನಮ್ಮ ಆತ್ಮಿಕ ಮೂಲವು ಆತನಿಂದ ನಮಗಿರುವುದು, ಆತ್ಮಿಕವಾಗಿ ಆತನಿಗೆ ಸಂಬಂಧಿಸಿದವರು ಮತ್ತು ಆತನ ಸ್ವಭಾವದ ಕುಟುಂಬದ ಗುಣಲಕ್ಷಣಗಳನ್ನು ಹೊಂದಿಕೊಂಡಿರುವೆವು.

## ನಂಬಿಕೆಯ ಮತ್ತು ಕ್ರಿಯೆಯ ಜನರು

ಯೇಸುವಿನ ಬೋಧನೆಯು “ನಂಬಿಕೆ” ಎಂದು ಕರೆಯಲ್ಪಟ್ಟಿದೆ ಯಾಕಂದರೆ ಅದು ತನ್ನ ಅನುಯಾಯಿಗಳಲ್ಲಿ ನಂಬಿಕೆಯನ್ನು ಕೇಳುತ್ತದೆ. ನಂಬಿಕೆಯು ನಮ್ಮನ್ನು ಕೃತ್ಯಗಳಿಗೆ ನಡಿಸುವ ಪ್ರಚೋಧಿಸುವ ಶಕ್ತಿಯಾಗಿದೆ. ಕೃತ್ಯಗಳನ್ನು ಪ್ರಚೋಧಿಸಿದ ನಮ್ಮ ನಂಬಿಕೆಯ ಕಾರಣದಿಂದ ನಮ್ಮ ಕ್ರಿಯೆಗಳು ಬಹುಮಾನಿಸಲ್ಪಡುತ್ತವೆ. ನಂಬಿಕೆಯಿಲ್ಲದ ಕ್ರಿಯೆಗಳು ಬೆಲೆಯಿಲ್ಲದವುಗಳಾಗಿವೆ (ಇಬ್ರಿಯ 11:6), ಮತ್ತು ಕ್ರಿಯೆಯಿಲ್ಲದ ನಂಬಿಕೆಯು ಬೆಲೆಯಿಲ್ಲದ್ದಾಗಿದೆ (ಯಾಕೋಬ 2:24). ಮೆಚ್ಚಿಸುವ ನಂಬಿಕೆಯ, ಕ್ರಿಯೆಯ ಪರಿಣಾಮದ ಕಾರಣ ಬಹುಮಾನಿಸಲ್ಪಡುವ ನಂಬಿಕೆಯ ದೇವರ ದೃಷ್ಟಾಂತವು ಇಬ್ರಿಯ 11ರಲ್ಲಿ ಕೊಡಲ್ಪಟ್ಟಿದೆ. ಈ ಕೆಳಗಿನವರ ವಿಶ್ವಾಸವು ಅವರನ್ನು ಕ್ರಿಯೆಗೆ ನಡಿಸಿದ್ದರಿಂದ ಅವರು ದೇವರಿಗೆ ಮೆಚ್ಚಿಕೆಯುಳ್ಳವರಾಗಿದ್ದಾರೆ:

ಹೇಬೆಲನು ತನ್ನ ಯಜ್ಞವನ್ನು ಅರ್ಪಿಸಿದನು (ವಚನ 4).
ಹನೋಕನು, ದೇವರೊಂದಿಗೆ ನಡೆದವನು (ನೋಡಿರಿ ಆದಿಕಾಂಡ 5:24),
ಮೇಲಕ್ಕೆ ಒಯ್ಯಲ್ಪಟ್ಟನು (ವಚನ 5).
ನೋಹನು ಒಂದು ನಾವೆಯನ್ನು ಸಿದ್ಧಪಡಿಸಿದನು (ವಚನ 7)
ಅಬ್ರಹಾಮನು ವಿಧೇಯನಾದನು ಮತ್ತು ದೇವರು ಆಜ್ಞಾಪಿಸಿದಂತೆ ಹೊರಗೆ
ಹೋದನು (ವಚನ 8).
ಸಾರಳು ಗರ್ಭಧರಿಸಿದಳು (ವಚನ 11).
ಅಬ್ರಹಾಮನು ಇಸಾಕನನ್ನು ಅರ್ಪಿಸಿದನು (ವಚನ 17).
ಯೋಸೇಫನು ತನ್ನ ಎಲುಬುಗಳನ್ನು ಕುರಿತು ಅಪ್ಪಣೆಗಳನ್ನು ಕೊಟ್ಟನು (ವಚನ 22).
ಮೋಶೆಯ ತಂದೆ ತಾಯಿಗಳು ಅವನನ್ನು ಅಡಗಿಸಿಟ್ಟರು (ವಚನ 23).
ಮೋಶೆಯು ದೊಡ್ಡವನಾದಾಗ, ಫರೋಹನ ಕುಮಾರ್ತೆಯ ಮಗ ಎಂದು
ಕರೆಯಲ್ಪಡುವದನ್ನು ನಿರಾಕರಿಸಿದನು (ವಚನ 24).
ಮೋಶೆಯು ಐಗುಪ್ತವನ್ನು ಬಿಟ್ಟು ಹೋದನು (ವಚನ 27).
ಮೋಶೆಯು ಪಸ್ಕಹಬ್ಬ ಆಚರಿಸಿದನು (ವಚನ 28).
ಇಸ್ರಾಯೇಲ್ಯರು ಸಮುದ್ರದ ಮುಖಾಂತರ ನಡೆದು ಹೋದರು (ವಚನ 29).
ಇಸ್ರಾಯಲ್ಯರು ಯೆರಿಕೋವಿನ ಗೋಡೆಗಳ ಸುತ್ತ ಸುತ್ತಿದರು (ವಚನ 30).
ರಹಾಬಳು ಗೂಢಚಾರರನ್ನು ಅಡಗಿಸಿಟ್ಟಳು (ವಚನ 31).

ಈ ವಿಧೇಯ ನಂಬಿಕೆಯ ಉದಾಹರಣೆಗಳು, ಆತನ ವಾಕ್ಯದ ಮೇಲೆ

ಅವಲಂಭಿಸಿ, ವಿಧೇಯತೆಯಿಂದ ಕಾರ್ಯಮಾಡುವದಕ್ಕೆ ನಮ್ಮನ್ನು ನಡಿಸುವ ನಂಬಿಕೆಯನ್ನು ಮಾತ್ರವೇ ದೇವರು ಸ್ವೀಕರಿಸುತ್ತಾನೆ ಎಂಬುದಕ್ಕೆ ಪುರಾವೆಯಾಗಿದೆ. ನಾವು ನಂಬಿಕೆಯಿಂದ ವಿಧೇಯರಾಗುತ್ತೇವೆ ಯಾಕಂದರೆ ದೇವರು ತಾನು ವಾಗ್ದಾನ ಮಾಡಿದ್ದರ ಪ್ರಕಾರ ಆತನು ಪ್ರತಿಫಲ ಕೊಡುವನೆಂದು ನಾವು ನಂಬುತ್ತೇವೆ. ದೇವರು ನಮಗೆ ಕೊಡುವ ಆಶೀರ್ವಾದಗಳು ಆತನ ಕಾರ್ಯದ ಮುಖಾಂತರ ಪೂರೈಸಲ್ಪಡುತ್ತವೆ; ನಮ್ಮ ನಂಬಿಕೆಯ ಒಂದು ವ್ಯಕ್ತಪಡಿಸುವಿಕೆಯಂತೆ ನಮ್ಮಿಂದ ಆತನು ಕೇಳುವ ಕಾರ್ಯದ ಮುಖಾಂತರ ಅವು ಸಾಧಿಸಲ್ಪಡುವದಿಲ್ಲ.

ಬಾಪ್ತಿಸ್ಮವು ಅನಾವಶ್ಯಕ ಎಂದು ಬೋಧಿಸುವರು "ನಂಬಿಕೆ ಮಾತ್ರವೇ" ಎಂಬ ತಮ್ಮ ತತ್ವವನ್ನು ಪೌಲನ ಬರಹಗಳ ಮೇಲೆ ಅವಲಂಭಿಸುತ್ತಾರೆ. ಹೀಗಿದ್ದರೂ, ಇದು ಪೌಲನ ಬೋಧನೆಯನ್ನು ತಿಳಿದುಕೊಳ್ಳುವದರಲ್ಲಿ ಕೊರತೆಯನ್ನು ತೋರಿಸುತ್ತದೆ ಮತ್ತು ಪೌಲನು ಯೇಸುವಿನ ಮಾತುಗಳನ್ನೂ ಮತ್ತು ಹೊಸ ಒಡಂಬಡಿಕೆಯನ್ನೂ ವಿರೋಧಿಸುವವನಂತೆ ಮಾಡುತ್ತದೆ. ತಂದೆಯ ಚಿತ್ತವನ್ನು "ಮಾಡುವವರು" ಪರಲೋಕರಾಜ್ಯವನ್ನು ಸೇರುವರು ಎಂದು ಬೋಧಿಸಿದನು (ಮತ್ತಾಯ 7:21). ಜನರು ದೇವರ ವಾಕ್ಯವನ್ನು ಕೇಳುವದರಿಂದ ಮತ್ತು ಅದನ್ನು "ಕೈಕೊಳ್ಳುವದರಿಂದ" ಅವರು ಆಶೀರ್ವದಿಸಲ್ಪಡುವರು ಎಂದು ಆತನು ಹೇಳಿದನು (ಲೂಕ 11:28). ಇದಲ್ಲದೇ, "ನಿತ್ಯಜೀವಕ್ಕಾಗಿ ಉಳಿಯುವಂಥ ಆಹಾರಕ್ಕಾಗಿ ... ದುಡಿಯಿರಿ" (ಯೋಹಾನ 6:27) ಎಂದು ಆತನು ಜನರನ್ನು ಪ್ರೋತ್ಸಾಹಿಸಿದನು. "ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೆ ಹೊರತು ಬರೀ ನಂಬಿಕೆಯಿಂದಲ್ಲ" (ಯಾಕೋಬ 2:24) ಎಂದು ಯಾಕೋಬನು ಬೋಧಿಸಿದನು. "ಸತ್ಯಕ್ಕೆ ವಿಧೇಯತೆಯ" (1 ಪೇತ್ರ 1:22) ಮುಖಾಂತರ ನಮ್ಮ ಪ್ರಾಣಗಳು ಶುದ್ಧೀಕರಿಸಲ್ಪಡುವವು ಎಂದು ಪೇತ್ರನು ಬೋಧಿಸಿದನು. "ಆತನನ್ನು ಬಲ್ಲವರಾಗಿದ್ದೇವೆಂದು ತಿಳಿದುಕೊಳ್ಳುತ್ತೇವೆ" ಮತ್ತು ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ, "ನಾವು ಆತನಲ್ಲಿ ನೆಲೆಗೊಂಡಿದ್ದೇವೆ ಎಂಬುದನ್ನು ತಿಳಿದುಕೊಳ್ಳುತ್ತೇವೆ" ಎಂದು ಯೋಹಾನನು ಬರೆದಿದ್ದಾನೆ (1 ಯೋಹಾನ 2:3-5; 3:24).

"ನಂಬಿಕೆ ಮಾತ್ರವೇ" ಎಂಬ ತತ್ವವು ಪೌಲನನ್ನು ತನ್ನನ್ನು ತಾನೇ ವಿರೋಧಿಸಿಕೊಳ್ಳುವಂತೆ ಮಾಡುತ್ತದೆ, ಯಾಕಂದರೆ ನಿತ್ಯ ಜೀವವು, "ಪ್ರಭಾವಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ" ಕೊಡಲ್ಪಡುವದೆಂದು ಅವನು ಬರೆದನು (ರೋಮಾಪುರ 2:7). "ನೀವು ಮುಂಚೆ ಪಾಪಕ್ಕೆ ದಾಸರಾಗಿದ್ದರೂ ನಿಮಗೆ ಕಲಿಸಲ್ಪಟ್ಟ ಬೋಧನೆಗೆ ನೀವು ಮನಃ ಪೂರ್ವಕವಾಗಿ ಅಧೀನರಾದದರಿಂದಲೂ, ಪಾಪದಿಂದ ಬಿಡುಗಡೆಯನ್ನು ಹೊಂದಿ, ನೀತಿಗೆ ದಾಸರಾದದರಿಂದಲೂ, ದೇವರಿಗೆ ಸ್ತೋತ್ರವಾಗಲಿ" (ರೋಮಾಪುರ 6:17, 18); ಎಂದೂ "ಮನೋಭೀತಿಯಿಂದ ನಡುಗುವವರಾಗಿ ನಿಮ್ಮ ನಿಮ್ಮ ರಕ್ಷಣೆಯನ್ನು ಸಾಧಿಸಿಕೊಳ್ಳಿರಿ" (ಫಿಲಿಪ್ಪಿ 2:12ಬಿ) ಎಂದೂ ಬರೆದನು. ಇಬ್ರಿಯ 5:9ರಲ್ಲಿ ಯೇಸುವು, "ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" ಎಂದು ಓದುತ್ತೇವೆ.

ಬಾಪ್ತಿಸ್ಮವು, ತನ್ನಲ್ಲಿ ತಾನೇ, ಪಾಪಗಳನ್ನು ತೆಗೆದು ಹಾಕುವ ಕಾರ್ಯವಾಗಿರುವದಿಲ್ಲ, ಅದು ಯೇಸುವಿನ ಕಾರ್ಯದಲ್ಲಿ ನಂಬಿಕೆಯ ಮೇಲೆ ಅವಲಂಭಿಸಿರುತ್ತದೆ. ಈ ಸಂಗತಿಯ ಅರ್ಥ, ಕೃತ್ಯವನ್ನು ಪ್ರೇರೇಪಿಸಿದ ದೇವರ ಕಾರ್ಯದಲ್ಲಿ ನಂಬಿಕೆಯ ನಿಮಿತ್ತವಾಗಿ ಬಹುಮಾನಿಸಲ್ಪಟ್ಟ ನಂಬಿಕೆಯ ಸರಳ ಉತ್ತರವಾಗಿದೆ.



© 2009 Truth for Today